ನಿಗೂಢ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವ ಸಿದ್ಧತೆಯಾಗಿತ್ತು. ಅದು ಬೆಳಕಿನಲ್ಲಿ ಇರುವುದಿಲ್ಲ, ಬೆಳಕು ಹುಟ್ಟುವುದಕ್ಕೂ ಮುನ್ನಿನ ಕ್ಷಣದಲ್ಲಿದೆ. ಅದು ನನ್ನಲ್ಲೇನೊ ಶಕ್ತಿ ತುಂಬುತ್ತಿತ್ತು.

◆ ನಿಮ್ಮ ಬರವಣಿಗೆಯ ದಿನಚರಿ ಹೇಗಿರುತ್ತದೆ?

ಮನೆಯಿಂದ ಹೊರಹೋಗಬೇಕಾದ ಇಲ್ಲವೇ ಫೋನ್ ಕರೆಗಳನ್ನು ಸ್ವೀಕರಿಸಬೇಕಾದ ಅಗತ್ಯವಿಲ್ಲದ, ಒಟ್ಟಾರೆ ಯಾವುದೇ ತಡೆಯಿಲ್ಲದಂತೆ ಪಟ್ಟಾಗಿ ಕೂತು ಬರೆಯಬೇಕು ಅನ್ನುವ ಕನಸಿದೆ. ಆದರೆ, ಹಾಗೆಂದೂ ಆಗಿಲ್ಲ. ಬರೆಯಲೊಂದು ಪುಟ್ಟ ಮೇಜು. ಅಲ್ಲಿ ಕೂತಾಗ ಬದುಕಿನ ಉಳಿದೆಲ್ಲ ಜಂಜಾಟಗಳ ನಡುವೆಯೂ ಬರವಣಿಗೆಯ ಸ್ಪೇಸ್ ತಾನಾಗಿ ಹುಟ್ಟಿಕೊಳ್ಳುತ್ತದೆ. ಒಂಬತ್ತರಿಂದ ಐದು ಕೆಲಸದ ಸಮಯವಾದ್ದರಿಂದ ನಿರಂತರವಾಗಿ ಬರೆಯಲು ಸಾಧ್ಯವಾಗುವುದಿಲ್ಲ. ಸಮಯ ಸಿಕ್ಕಾಗ ಬರೆಯಬೇಕು. ವಾರಾಂತ್ಯಗಳನ್ನು ಇದಕ್ಕಾಗಿಯೇ ಮೀಸಲಿಡಬೇಕು. ಅದರಲ್ಲೂ ಮುಂಜಾನೆ ಹೊತ್ತಿನಲ್ಲೇ ಬರೆಯಬೇಕು.

◆ ಕೆಲಸದಿಂದ ಬಂದ ಮೇಲೆ ಬರೆಯುತ್ತೀರಾ?

ಅದು ಕಷ್ಟ. ಏನೋ ಅನ್ನಿಸಿದ ತಕ್ಷಣ, ಏನೋ ಒಂದು ಹೊಳೆದ ತಕ್ಷಣ ಬರೀಬೇಕು, ಬೇರೆಲ್ಲ ಕೆಲಸ ಬಿಟ್ಟು ಬರೆಯೋಕೆ ಕೂರಬೇಕು ಅಂತ ಎಷ್ಟೋ ಸಲ ಪ್ರಯತ್ನಿಸಿದಿನಿ.

◆ ರಾಬರ್ಟ್ ಫ್ರಾಸ್ಟ್ (ಅಮೆರಿಕದ ಕವಿ) ರೈಲಿನಲ್ಲಿ ಹೋಗುವಾಗ ಏನಾದರೂ ಹೊಳೆದರೆ ಶೂ ಮೇಲೆ ಬರೆದಿಟ್ಟುಕೊಳ್ಳುತ್ತಿದ್ದನಂತೆ. ನೀವು ಹಾಗೆ ಮಾಡುವಿರಾ? ವಿಮಾನದಲ್ಲಿ ಹೋಗುವಾಗ ಬರೆಯಬಲ್ಲಿರಾ?

ಕೆಲವೊಮ್ಮೆ ಯಾವುದೋ ಪದ ಬರೆಯುವಾಗ ಹೊಳೆದಿರುವುದಿಲ್ಲ. ಅಂತಹದ್ದು ಹೊಳೆದಾಗ ಹೋಟೆಲಿನಲ್ಲೊ, ಬೇರೆಲ್ಲೋ ಸಿಕ್ಕ ಕಾಗದದ ತುಂಡುಗಳ ಮೇಲೆ ಬರೆದಿಡುತ್ತೇನೆ. ಅದು ಹೊಳೆದಾಗ ನಿಮಗೆ ಗೊತ್ತಾಗುತ್ತದೆ. ಅದು ಹೊಳೆದಾಗಲೇ ನೀವದನ್ನು ಬರೆದಿಡಬೇಕು.

◆ ನೀವು ಯಾವುದರಲ್ಲಿ ಬರೆಯುವಿರಿ?

ಪೆನ್ಸಿಲ್.

◆ ಕಂಪ್ಯೂಟರಿನಲ್ಲಿ ಬರೆಯುವುದಿಲ್ಲವೇ?

ಎಲ್ಲ ಬರೆದು ಮುಗಿಸಿದ ಮೇಲೆ ಕಂಪ್ಯೂಟರಿನಲ್ಲಿ ಟೈಪ್ ಮಾಡುತ್ತೇನೆ. ಟೈಪಿಸಿದ್ದನ್ನು ಮತ್ತೊಮ್ಮೆ ಓದುತ್ತೇನೆ. ಮೊದಲು ಬರೆಯುವುದು ಪೆನ್ಸಿಲ್‌ನಲ್ಲಿ. ಪೆನ್ಸಿಲ್ ಇಲ್ಲದಿದ್ದರೆ ಬಾಲ್‌ಪೆನ್ನಿನಲ್ಲಿ ಬರೀತಿನಿ. ಸಾಮಾನ್ಯವಾಗಿ ಇಂತಹದ್ದೇ ಅಂತಿಲ್ಲ. ಆದರೆ, ಹಳದಿ ಬಣ್ಣದ ಹಾಳೆಗಳು, ಎರಡನೇ ನಂಬರ್ ಪೆನ್ಸಿಲ್ ನನ್ನ ಆಯ್ಕೆ.

◆ ಟಿಕೊಂಡೆರೋಗಾದ ಎರಡನೇ ನಂಬರ್‌ನ ಸಾಫ್ಟ್ ಪೆನ್ಸಿಲ್?

ಹೌದು. ಒಮ್ಮೆ ಟೇಪ್‌ರೆಕಾರ್ಡರ್ ಬಳಸಿ ಬರೆಯಲು ಪ್ರಯತ್ನಿಸಿದೆ. ಸರಿಹೋಗಲಿಲ್ಲ.

◆ ಅಂದರೆ ನೀವು ಕತೆಯನ್ನು ಡಿಕ್ಟೇಟ್ ಮಾಡಿದಿರಾ?